

# ಆಯಾಮದ ಹರಹು

ಸವಿತಾ ಶ್ರೀನಿವಾಸ
ಕಲೆ: ಈಶ್ವರ ಬಡಿಗೇರ್

ಪರದೆ ತೆರೆದಂತೆ ಒಂದೊಂದೇ ಆಯ್ಕೆಗಳನ್ನು ಹಳ್ಳ ದಿಣ್ಣೆಗಳ ಸಮೀಕರಣದೊಂದಿಗೆ ಮುಂದಿಡುತ್ತಿದ್ದ ಹೋಲೊಗ್ರಾಫಿಕ್ ಪ್ರಕಾಶ ಬಿಂಬದ ಕಂಪ್ಯೂಜೆಕ್ಟರ್ ರಜತ್‌ಗೆ ತನ್ನಲ್ಲಿರುವ ಅಪರಿಮಿತ ಕಣಜದ ಅನಾವರಣ ಮಾಡುತ್ತಿತ್ತು. ರಜತ್‌ನ ಮನಃಪಟಲದಲ್ಲಿ ಸದ್ಯ ಮೂಡಿಬರುತ್ತಿದ್ದ ಆಲೋಚನೆ 'ವ್ಯಕ್ತಿಯ ಜೀವನ ಶೈಲಿ.' ಅದು ವೈಯಕ್ತಿಕ ನೆಲೆಯಲ್ಲಿ ಮೂಡಿತ್ತಾದರೂ ಕ್ಷೇತ್ರ ನಕ್ಷೆಯ ರಚನಾತ್ಮಕ ಭೂವಿಜ್ಞಾನವನ್ನು ಗಣನೆಗೆ ತೆಗೆದುಕೊಂಡು ಭೂಕಾಲಶಾಸ್ತ್ರದ ಎಲ್ಲಾ ಪರಿಮಿತಿಗಳನ್ನು ಪ್ರಸ್ತುತಪಡಿಸುತ್ತಿತ್ತು.

'ಹೇ... ಮೊದಲು ನನ್ನ ಸರದಿ. ಈ ಪ್ರಯೋಗಕ್ಕೆ ನಾನೇ ಮೊದಲ ಪ್ರಯೋಗಶಿಶು' ಎಂದುಕೊಳ್ಳುತ್ತಾ ತನ್ನ ಚಿಕ್ಕಂದಿನ ದೈನಂದಿನ ಜೀವನ ಶೈಲಿಯ ಜೊತೆಗೆ ಪ್ರಸ್ತುತ ಕಾರ್ಯನಿರ್ವಹಣೆಯ ತೂಗುಯ್ಯಾಲೆಯಲ್ಲಿ ಮುಂದುವರಿದು ಭವಿಷ್ಯತ್ತಿಗೂ ಇಣುಕು ನೋಟ ನೀಡಿತು. ತಾನು ಶಾಲೆಯ ಬಸ್‌ಗಾಗಿ ತಾಯಿಯೊಂದಿಗೆ ಕಾಯುತ್ತಿದ್ದ ಸ್ಥಳ, ಶಾಲೆಯ ವಾರ್ಷಿಕೋತ್ಸವ ಆಚರಣೆಯ ತಾಣ, ಸಮಯ ಸಿಕ್ಕಾಗ ಗೆಳೆಯರ ಮನೆಗೆ ದೌಡಾಯಿಸು, ತನ್ನ ನೆಚ್ಚಿನ ಅಂಗಡಿ, ಹೋಟೆಲ್... ಆರೋಗ್ಯ ಕೆಟ್ಟಾಗ ಧಾವಿಸುತ್ತಿದ್ದ ಕ್ಲಿನಿಕ್... ವಿರಾಮದ ವೇಳೆ ಕಾಲ ಕಳೆಯುತ್ತಿದ್ದ ಕ್ಲಬ್... ಒಂದೆರಡಲ್ಲ. ತನ್ನ ದಿನಚರಿಯನ್ನು ರೂಪಿಸುತ್ತಾ ಇಂದಿನ 'ನನ್ನನ್ನು' ರೂಪಿಸಿದ ದಿನಗಳು. ಅದರ ಹಿನ್ನೆಲೆಯಲ್ಲೇ ತನ್ನ ಇಪ್ಪತ್ತೇಳು ವರ್ಷಗಳು ಕಳೆದ ದಿನಗಳಿಗೆ ಬೆನ್ನುಡಿ ಹಾಡಿ ಪ್ರಸ್ತುತದ ಹಂತ ತೆರೆದುಕೊಂಡಿತ್ತು. ಅದನ್ನು ಮೂಡಿಸುವ ತವಕದಲ್ಲಿದ್ದಾಗಲೇ ಅವನ ಸಹೋದ್ಯೋಗಿ ಭವಿತಾ ಅವನ ಕೋಣೆಗೆ ಆಗಮಿಸಿ ಅವನ ಕಾರ್ಯವನ್ನು ವೀಕ್ಷಿಸುತ್ತಾ ಕೇಳಿದಳು 'ರಜತ್... ನಿನ್ನ ಇಂದಿಗೆ ನನ್ನ ಜೀವನದ ಸಮೀಕರಣ ಶುರುವಾಗಿದೆಯೇ?' ಅವಳ ಪ್ರಶ್ನೆ ಸಹಜವಾಗಿತ್ತು. ಆದರೂ ಕೀಟಲೆ ಮಾಡುವ ದೃಷ್ಟಿಯಿಂದ ರಜತ್ ಕಿಚಾಯಿಸಿದ.

"ಹೌದು ಡಿಯರ್, 'ಇಂದು' ಹಾಗೂ 'ನಾಳೆ' ನಿನ್ನಯ ಹೊರತಾಗಿ ಖಾಲಿ ಖಾಲಿ ಇರುತ್ತದೆಯಷ್ಟೇ. 'ಹೂಂ ಕಂಡಿದ್ದೀನಿ, ರಜತ್. ನಿನ್ನ ಪೆಟ್ ಪ್ರಾಜೆಕ್ಟ್‌ಗೆ ನಿನ್ನ ಜೀವನವನ್ನೇ ಪರೀಕ್ಷಾತ್ಮಕವಾಗಿ ಆಯ್ದುಕೊಂಡು ಪ್ರಯೋಗಶಿಶುವಾಗಿರುವೆ. ನಿನಗೆ ಅಭಿನಂದನೆಗಳು. ಹಾಗೆಯೇ ಆಗಿಂದಾಗ್ಗೆ ನಿಮ್ಮ ಆ ಲೋಕದಿಂದ ವಾಸ್ತವಕ್ಕಿಳಿದು ಊಟ, ನಿದ್ದೆ ಕಡೆ ಸಹ ಗಮನ ಹರಿಸುವಂತವರಾಗಲಿ.'

'ಓ... ಖಂಡಿತಾ ಡಿಯರ್, ಮನೆಯಲ್ಲಿ ಅಮ್ಮನ ಮನೆ ಊಟ ತಪ್ಪಿಸಲಿಕ್ಕಾಗುತ್ತಾ, ಮುಂದೆ ನಿನ್ನ ಕೈರುಚಿಯನ್ನು ಸವಿಯಬಹುದು..." ಎಂದಾಗ ಭವಿತಾ ಅದಕ್ಕೆ ಮತ್ತಷ್ಟು ಉಲ್ಲೇಖಗಳನ್ನು ಪೋಣಿಸಿದಳು.

'... ನಾವು ಡ್ರಾಫ್ಟ್ ರೂಮ್‌ನಲ್ಲಿ ಭೇಟಿಯಾಗಿ ಪರಿಚಿತರಾದ ದಿನ ನೆನಪಿದೆಯೇ, ನಮ್ಮ ಮ್ಯಾನೇಜರ್ ನಕ್ಷೆಗೆ ಡ್ರೋನ್ ವ್ಯೂ ಒದಗಿಸುವ ಕುರಿತು ವಿವರಿಸುವಾಗ ನೀನು